# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 20


ಸ್ವಾಮಿ ನಿತ್ಯಸ್ಥಾನಂದ

### ಭಗವತ್ಸಾಕ್ಷಾತ್ಕಾರದ ವಿವಿಧ ಹಂತಗಳು

ಭಗವಂತನ ಸಾಕ್ಷಾತ್ಕಾರ, ಭಗವಂತನ ದರ್ಶನ ಎಂದರೆ ಏನು, ಅದನ್ನು ಪಡೆದುಕೊಳ್ಳುವುದು ಹೇಗೆ? ಎಂಬ ‘ಮ’ ಅವರ ಪ್ರಶ್ನೆಗೆ ಉತ್ತರಿಸುತ್ತ ಶ್ರೀರಾಮಕೃಷ್ಣರು ಹೇಳುತ್ತಾರೆ: ‘‘ವೈಷ್ಣವರು ಹೇಳುತ್ತಾರೆ, ಮುಮುಕ್ಷುಗಳಲ್ಲಿ ಮತ್ತು ಮುಕ್ತರಲ್ಲಿ ವಿವಿಧ ಅಂತಸ್ತಿನವರು ಇದ್ದಾರೆ. ಅವರೇ ಪ್ರವರ್ತಕರು, ಸಾಧಕರು, ಸಿದ್ಧರು, ಸಿದ್ಧರ ಸಿದ್ಧರು. ಯಾರು ಈಗತಾನೆ ಮಾರ್ಗಕ್ಕೆ ಇಳಿದಿದ್ದಾನೊ ಅವನೇ ಪ್ರವರ್ತಕ. ಯಾರು ಸಾಧನೆ, ಭಜನೆ ಮಾಡುತ್ತಿದ್ದಾನೊ — ಪೂಜೆ, ಜಪ, ಧ್ಯಾನ, ಭಗವನ್ನಾಮ ಗುಣ ಕೀರ್ತನೆ ಮಾಡುತ್ತಿದ್ದಾನೊ ಅವನೇ ಸಾಧಕ. ಯಾರು ಭಗವಂತನಿದ್ದಾನೆ ಎಂಬುದನ್ನು ತನ್ನ ಸ್ವಂತ ಅನುಭವದಿಂದ ಅರಿತುಕೊಂಡಿದ್ದಾನೊ ಅವನೇ ಸಿದ್ಧ. ಇದನ್ನು ವಿವರಿಸಲು ವೇದಾಂತದಲ್ಲಿ ಒಂದು ಉಪಮೆ ಇದೆ. ಮನೆಯ ಯಜಮಾನ ಒಂದು ಕತ್ತಲೆಯಲ್ಲಿ ಕೊಠಡಿಯಲ್ಲಿ ಮಲಗಿದ್ದಾನೆ. ಒಬ್ಬ ಆತನನ್ನು ಕತ್ತಲೆಯಲ್ಲಿ ತಡವರಿಸಿಕೊಂಡು ಹುಡುಕುತ್ತಿದ್ದಾನೆ. ಒಂದು ಸೋಫಾಕ್ಕೆ ಕೈ ಹಾಕಿ ಹೇಳುತ್ತಾನೆ ‘ಇದಲ್ಲ’, ‘ನೇತಿ’ ‘ನೇತಿ’ ಅಂತಲೇ ಮುಂದುವರಿಯುತ್ತಿದ್ದಾನೆ. ಕೊನೆಗೆ ಯಜಮಾನನ ಶರೀರ ಕೈಗೆ ತಾಗುತ್ತದೆ. ಆಗ ಹೇಳುತ್ತಾನೆ. ‘‘ಓ, ಇಲ್ಲೇ ಯಜಮಾನರು!’’ ಎಂದರೆ ಯಜಮಾನ ಇರುವುದರ ಅನುಭವ ಅವನಿಗೆ ಬಂತು. ಯಜಮಾನನೇನೋ ಆತನ ಕೈಗೆ ಸಿಕ್ಕಿದ. ಆದರೆ ಆತನನ್ನು ವಿಶೇಷವಾಗಿ ಇನ್ನೂ ಅರಿತಿಲ್ಲ.

‘‘ಇನ್ನೊಂದು ಅಂತಸ್ತಿನವರಿದ್ದಾರೆ, ಅವರಿಗೆ ಸಿದ್ಧರ ಸಿದ್ಧರು ಎಂಬುದಾಗಿ ಹೆಸರು. ಯಜಮಾನನೊಡನೆ ವಿಶೇಷ ರೀತಿಯಲ್ಲಿ ಮಾತುಕತೆ ಆಡಿದರೆ, ಭಗವಂತನೊಡನೆ ವಿಶೇಷ ರೀತಿಯಾಗಿ ಭಕ್ತಿ ಪ್ರೇಮ ಇವುಗಳಿಂದ ಮಾತುಕತೆ ಆಡಿದರೆ, ಆಗ ಅನುಭವ ಆಗಿಬಿಡುತ್ತದೆ. ಸಿದ್ಧ ಭಗವಂತನ ಸಾಕ್ಷಾತ್ಕಾರವನ್ನೇನೋ ಮಾಡಿಕೊಂಡಿದ್ದಾನೆ. ಆದರೆ ‘ಸಿದ್ಧರ ಸಿದ್ಧ’ ಭಗವಂತನೊಡನೆ ವಿಶೇಷ ರೀತಿಯಲ್ಲಿ ಮಾತುಕತೆ ಆಡಿದ್ದಾನೆ.’’

ಪ್ರವರ್ತಕನ ಮನಸ್ಸು ಯಾವುದೋ ಘಟನೆಯಿಂದಾಗಿಯೋ, ಸ್ಫೂರ್ತಿಯಿಂದಾಗಿಯೋ, ವೈರಾಗ್ಯದ ಅಂಕುರಾರ್ಪಣವಾಗಿ ಅಧ್ಯಾತ್ಮದ ಕಡೆ ವಾಲಿರುತ್ತದೆ. ಆದರೆ ಯಾವ ರೀತಿ ಮುಂದುವರಿಯಬೇಕು ಎಂದು ನಿರ್ದಿಷ್ಟತೆ ಇರುವುದಿಲ್ಲ. ಅನೇಕ ಸಾಧುಗಳು, ಗುರುಗಳು ಎನಿಸಿಕೊಂಡವರನ್ನು ಸಂಧಿಸುತ್ತಾನೆ. ಅನೇಕ ಆಧ್ಯಾತ್ಮಿಕ ಗ್ರಂಥಗಳನ್ನು ಓದುತ್ತಾನೆ. ಹೀಗೆ



ಒಂದು ರೀತಿಯ ಅಲೆದಾಟದಲ್ಲೇ ಇರುತ್ತಾನೆ. ಸರಿಯಾದ ಗುರುವಿನಿಂದ ಮಾರ್ಗದರ್ಶನವನ್ನು ಪಡೆದು, ತನ್ನ ವಿಚಾರ ಶಕ್ತಿಯ ಮೂಲಕವೂ ಅತ್ಯಂತ ತಾಳ್ಮೆಯಿಂದ ಪ್ರಾಮಾಣಿಕ ಸಾಧನೆ ಮಾಡುತ್ತಿರುವವನು ಸಾಧಕ. ಸಿದ್ಧನಿಗೆ ಭಗವಂತನ ಇರುವಿಕೆಯ ಜ್ಞಾನವಿದೆ ಮತ್ತು ಅದು ನಿಸ್ಸಂಶಯವಾದುದು. ಇದಕ್ಕೆ ಹಿಂದಿನ ಹಂತಗಳಲ್ಲಿ ಸಂಶಯಕ್ಕೆ ಅವಕಾಶವಿದೆ. ಸಿದ್ಧನಿಗೆ ಭಗವತ್ ಸ್ಪರ್ಶವಾಗಿದೆ. ಸಿದ್ಧರ ಸಿದ್ಧನು, ಶ್ರೀರಾಮಕೃಷ್ಣರು ಹೇಳುವಂತೆ, ಭಗವಂತನೊಡನೆ ನಿಕಟ ಸಂಬಂಧವನ್ನು ಅನುಭವಿಸುತ್ತಾನೆ, ಅವನೊಡನೆ ತಾದಾತ್ಮ್ಯಭಾವ ಹೊಂದಿರುತ್ತಾನೆ.

ಈ ಚಿಂತನೆಗಳು ಶ್ರೀ ವಿದ್ಯಾರಣ್ಯರ ‘ಜೀವನ್ಮುಕ್ತಿವಿವೇಕ’ದಲ್ಲಿ ವ್ಯಕ್ತವಾಗಿರುವ ವಿಶ್ಲೇಷಣೆಗೆ ಸಮೀಪವರ್ತಿಯಾಗಿವೆ. ಅಲ್ಲಿ ಜ್ಞಾನದ ದೃಷ್ಟಿಯಿಂದ ಹೇಳಿದರೆ ಇಲ್ಲಿ ಶ್ರೀರಾಮಕೃಷ್ಣರು ಭಕ್ತಿಯ ದೃಷ್ಟಿಯಿಂದ ಹೇಳುತ್ತಿದ್ದಾರೆ. ವಿದ್ಯಾರಣ್ಯರು ತತ್ತ್ವಜ್ಞಾನ, ವಾಸನಾಕ್ಷಯ ಮತ್ತು ಮನೋನಾಶ ಎಂಬ ಮೂರು ಹಂತಗಳನ್ನು ಗುರುತಿಸುತ್ತಾರೆ. ಮೊದಲು ಸಾಧಕನು ಆತ್ಮದ ಇರುವಿಕೆಯನ್ನು (ತತ್ತ್ವಜ್ಞಾನ) ಅನುಭವಿಸುತ್ತಾನೆ, ಇದು

ಕೇವಲ ಬೌದ್ಧಿಕ ಜ್ಞಾನವಲ್ಲ, ಅನುಭಾವಾತ್ಮಕ ಜ್ಞಾನ. ಇವನೇ ಶ್ರೀರಾಮಕೃಷ್ಣರು ಹೇಳುವ ಸಿದ್ಧ. ಆದರೂ ಸಾಧನೆ ಮುಂದು ವರಿಯುತ್ತದೆ. ವಾಸನೆಗಳು ಎಂದರೆ ಹಿಂದಿನ ಸಂಸ್ಕಾರಗಳು, ಅವುಗಳ ಕ್ಷಯವೆಂದರೆ ನಾಶವಾಗಬೇಕು. ವಾಸನೆಗಳ ನಾಶ ವಾದರೂ ಬಾಹ್ಯ ವಿಷಯ ಸಂಪರ್ಕದಿಂದ ಮನೋವೃತ್ತಿಗಳು ಏಳುತ್ತಿರುತ್ತವೆ. ಈ ವೃತ್ತಿಗಳ ಸಂಪೂರ್ಣ ವಿರೋಧವೇ ಮನೋ ನಾಶ. ಆಗ ಸಾಧಕನು, ಶ್ರೀರಾಮಕೃಷ್ಣರ ಭಾಷೆಯಲ್ಲಿ ಹೇಳುವು ದಾದರೆ, ಸಿದ್ಧರ ಸಿದ್ಧನಾಗುತ್ತಾನೆ. ಇವು ಒಂದಾದ ಮೇಲೆ ಮತ್ತೊಂದು ಬರುವಂತಹವಲ್ಲ, ಮೂರೂ ಒಂದಕ್ಕೊಂದು ಹೆಣೆದುಕೊಂಡಿವೆ. ಪ್ರಧಾನ ಮತ್ತು ಗೌಣ ಎಂಬ ದೃಷ್ಟಿಯಿಂದ ಇವುಗಳನ್ನು ವಿಭಾಗಿಸಲಾಗಿದೆ. ತತ್ತ್ವಜ್ಞಾನದ ಹಂತದಲ್ಲಿ ಉಳಿ ದೆರಡು ಗೌಣ, ಹೀಗೆಯೇ ಮುಂದೆಯೂ ತಿಳಿದುಕೊಳ್ಳಬೇಕು.

### ಪಂಚಭಾವಗಳು

ಶ್ರೀರಾಮಕೃಷ್ಣರು ಮುಂದುವರಿದು ಹೇಳುತ್ತಾರೆ: ''ಆದರೆ ಆತನ ಸಾಕ್ಷಾತ್ಕಾರ ಮಾಡಿಕೊಳ್ಳಬೇಕಾದರೆ ಯಾವುದಾದರೂ ಒಂದು ಭಾವವನ್ನು ಆಶ್ರಯಿಸಿಕೊಳ್ಳಬೇಕಾಗುತ್ತದೆ. ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ, ಮಧುರ ಇವುಗಳಲ್ಲಿ ಯಾವುದಾದರೂ ಒಂದನ್ನು.'' ಈ ಭಾವಗಳು ಯಾವುದೆಂಬುದನ್ನು ಶ್ರೀರಾಮ ಕೃಷ್ಣರು ವಿವರಿಸುತ್ತಾರೆ. *('ವಚನವೇದ', ಭಾಗ ೧, ಪು. ೪೯)*

ಈ ಪಂಚಭಾವಗಳು ವ್ಯಕ್ತಿಯ ವಿವಿಧ ಮನೋಭಾವಗಳನ್ನು ಅವಲಂಬಿಸಿರುತ್ತವೆ. ಕೆಲವರು ಶಾಂತಸ್ವಭಾವದವರು. ಅವರು ಭಾವಪ್ರಧಾನ ವ್ಯಕ್ತಿಗಳಲ್ಲ. ಅವರು ಯಾರೊಡನೆಯೂ ನಿಕಟ ಸಂಬಂಧವನ್ನು ಬೆಳೆಸಿಕೊಳ್ಳುವುದಿಲ್ಲ. ಎಲ್ಲರನ್ನೂ ಪ್ರೀತಿಸಿದರೂ ಯಾರೊಡನೆಯೂ ಅತಿಯಾಗಿ ಬೆರೆಯುವುದಿಲ್ಲ. ಇಂಥವರಿಗೆ ಶಾಂತಭಾವ — ಇವರು ಶಾಂತವಾಗಿ ಏಕಾಂತದಲ್ಲಿ ಭಗವದ್ ಧ್ಯಾನದಲ್ಲಿ ತೊಡಗುತ್ತಾರೆ. ಕೆಲವರಿಗೆ ಆಳಾಗಿರುವುದೇ ಇಷ್ಟ. ವಿಧೇಯತೆಯೇ ಇವರಲ್ಲಿ ಪ್ರಧಾನವಾಗಿರುತ್ತದೆ. ಅವರು ತಾವಾ ಗಿಯೇ ಏನನ್ನೂ ಮಾಡಲು ಮುಂದಾಗುವುದಿಲ್ಲ. ಪ್ರಾಪಂಚಿಕ ವಿಷಯಗಳಿಗೆ, ವ್ಯಕ್ತಿಗಳಿಗೆ ಆಳಾಗಿರುವುದಕ್ಕಿಂತ ಭಗವಂತನಿಗೆ ಆಳಾಗಿರುವುದು ಲೇಸೆಂದು, ಭಗವಂತನಿಗೆ ಅಧೀನರಾಗಿ ದಾಸ್ಯ ಭಾವದಿಂದ ಸಾಧನೆ ಮಾಡುತ್ತಾರೆ, ಆಂಜನೇಯನಂತೆ. ಮತ್ತೆ ಕೆಲವರು ಸ್ವಾಭಾವಿಕವಾಗಿಯೇ ಇತರರೊಡನೆ ಸುಲಭವಾಗಿ ಸ್ನೇಹ ಬೆಳೆಸಿಕೊಳ್ಳುತ್ತಾರೆ, ಹಾಗೆಯೇ ಅದನ್ನು ಉಳಿಸಿಕೊಳ್ಳು ತ್ತಾರೆ. ಈ ರೀತಿ ಉಳಿಸಿಕೊಳ್ಳುವುದಕ್ಕೆ ಪರಸ್ಪರರ ದೋಷಗಳನ್ನು ಮನ್ನಿಸುವುದು ಅತ್ಯಂತ ಆವಶ್ಯಕ. ಇಂತವರು ಭಗವಂತನೊಡನೆ ಸಖ್ಯಭಾವದಿಂದ ಸಂಬಂಧಿಸಿಕೊಳ್ಳುತ್ತಾರೆ. ವಾತ್ಸಲ್ಯಭಾವವು ವಿಶೇಷವಾಗಿ ಮಹಿಳೆಯರಲ್ಲಿ ಪ್ರಧಾನವಾಗಿರುತ್ತದೆ. ಅವರಿಗೆ ಮಾತೃಭಾವವು ಸ್ವಾಭಾವಿಕ. ಯಶೋದೆಯು ಇದಕ್ಕೆ ಮುಖ್ಯ ವಾದ ಉದಾಹರಣೆ. ಶ್ರೀರಾಮಕೃಷ್ಣರೂ ಈ ಭಾವವನ್ನು ಆರೋಪಿಸಿಕೊಂಡು ಶ್ರೀರಾಮನನ್ನು ಆರಾಧಿಸಿದ್ದರು. ಇದಕ್ಕೆ ಸಂಬಂಧಿಸಿದ ಇನ್ನೊಂದು ಭಾವ ಅಪತ್ಯಭಾವ – ಭಗವಂತ ತಾಯಿ, ತಾನಾಕೆಯ ಮಗು – ಎಂಬೀ ರೀತಿಯ ಸಂಬಂಧ. ಶ್ರೀರಾಮಕೃಷ್ಣರ ಪ್ರಧಾನ ಭಾವವೇ ಇದಾಗಿತ್ತು.

ಮುಂದಿನದು ಅತ್ಯಂತ ಪ್ರಧಾನವಾದ, ಅಷ್ಟೇ ತಪ್ಪು ಗ್ರಹಿಕೆಗೆ ಕಾರಣವಾದ, ಮಧುರಭಾವ. ಸ್ತ್ರೀಪುರುಷರ ನಡುವೆ ಒಂದು ಸ್ವಾಭಾವಿಕವಾದ ಆಕರ್ಷಣೆ ಇರುತ್ತದೆ. ಇದು ಲೈಂಗಿಕ ಆಕರ್ಷಣೆ ಯಾಗಿರಬೇಕೆಂದೇನೂ ಇಲ್ಲ. ಶ್ರೀಮಾತೆ ಶಾರದಾದೇವಿಯವ ರಿಗೆ ಶ್ರೀರಾಮಕೃಷ್ಣರ ವಿಚಾರದಲ್ಲಿ ಆ ರೀತಿಯ ಆಕರ್ಷಣೆ ಯಿತ್ತು. ಗೋಪಿಕಾಸ್ತ್ರೀಯರೂ ಶ್ರೀಕೃಷ್ಣನೆಡೆಗೆ ಅದೇ ರೀತಿ ಆಕ ರ್ಷಿತರಾದರು. ಸ್ವಾಮಿ ವಿವೇಕಾನಂದರು ಶಿಕಾಗೋ ಧರ್ಮ ಸಮ್ಮೇಳನದಲ್ಲಿ ತಮ್ಮ ಉಪನ್ಯಾಸವನ್ನು ಮುಗಿಸಿದಾಗ ಅನೇಕ ಸ್ತ್ರೀಯರು ಅವರ ಸ್ಪರ್ಶ ಮಾಡಲು, ಅವರ ಬಟ್ಟೆಯ ತುದಿ ಯನ್ನಾದರೂ ಸ್ಪರ್ಶಿಸಲು ವೇದಿಕೆಯ ಕಡೆ ನುಗ್ಗಿದರಂತೆ. ಅವರ ಈ ವರ್ತನೆಗೆ ಕಾರಣವಾದದ್ದು ಯಾವ ಆಕರ್ಷಣೆ? ದೇಹ ಸಂಬಂಧ ದೂರವಾದ ಸ್ತ್ರೀ–ಪುರುಷರ ನಡುವೆ ಒಂದು ಆಕ ರ್ಷಣೆಯಿದೆ. ಇದೇ ಮಧುರಭಾವದ ವಿಷಯ. ಮೀರಾ, ಅಕ್ಕಮಹಾದೇವಿ, ಆಂಡಾಳ್ ಮುಂತಾದವರು ಭಗವಂತನೆಡೆಗೆ ಈ ರೀತಿ ಆಕರ್ಷಿತರಾಗಿದ್ದರು. ಗೋಪಿಕಾಸ್ತ್ರೀಯರು ಶ್ರೀಕೃಷ್ಣ ನನ್ನು ಒಬ್ಬ ಸಾಮಾನ್ಯ ಪುರುಷನೆಂದು ಪ್ರೀತಿಸಿರಲಿಲ್ಲ. ಅವ ನನ್ನು ಭಗವಂತನೆಂದೇ ಪ್ರೀತಿಸಿದ್ದರು. 'ಗೋಪಿಕಾಗೀತೆ'ಯಲ್ಲಿ ಈ ಭಾವನೆಯು ಸ್ಪಷ್ಟವಾಗಿ ವ್ಯಕ್ತವಾಗಿದೆ:

**ನ ಖಲು ಗೋಪಿಕಾನಂದನೋ ಭವಾನ್**
**ಅಖಿಲದೇಹಿನಾಮಂತರಾತ್ಮದೃಕ್ ॥**

''ನೀನು ಕೇವಲ ಯಶೋದೆಯ ಕಂದನಲ್ಲ; ಎಲ್ಲ ದೇಹಿಗಳ ಅಂತಃಸಾಕ್ಷಿಯಾಗಿರುವ ನೀನು ಎಂಬುದು ನಮಗೆ ಗೊತ್ತು'' ಎಂದು ಗೋಪಿಯರು ಹೇಳುತ್ತಾರೆ. ಶ್ರೀ ನಾರದರೂ ಇದೇ ಅಭಿಪ್ರಾಯವನ್ನೇ ತಮ್ಮ ಸೂತ್ರಗಳಲ್ಲಿ ವ್ಯಕ್ತಪಡಿಸಿದ್ದಾರೆ. ಪರಾ ಭಕ್ತಿಗೆ ಉದಾಹರಣೆಯಾಗಿ ಗೋಪಿಕೆಯರನ್ನು ಪ್ರಸ್ತಾಪಿಸಿ, **'ನ ತತ್ರಾಪಿ ಮಾಹಾತ್ಮ್ಯಜ್ಞಾನವಿಸ್ಮೃತಿ-ಅಪವಾದಃ।'** ''ಅಲ್ಲಿಯೂ ಕೂಡ ಭಗವಂತನ ಮಹಿಮೆಯ ಅರಿವಿರಲಿಲ್ಲವೆಂದು ಅಪಾ ದಿಸುವಂತಿಲ್ಲ'', ಎಂದು ಹೇಳುತ್ತಾರೆ. ''ಅದಿಲ್ಲದಿದ್ದರೆ, ಜಾರೆ ಯರ ಪ್ರೀತಿಯಂತಾಗುತ್ತಿತ್ತು'' ಎಂದು ಅವರು ಅಭಿಪ್ರಾಯ ಪಡುತ್ತಾರೆ. *(ನಾರದ ಭಕ್ತಿಸೂತ್ರ, ೨೧, ೨೨, ೨೩)*

### ಭಕ್ತಿಯಿಂದಲೂ ಅದ್ವೈತಾನುಭವ

''ಭಗವಂತನ ದರ್ಶನ ಈ ಕಣ್ಣುಗಳಿಂದ ಸಾಧ್ಯವೆ?'' ಎಂಬ 'ಮ' ಅವರ ಪ್ರಶ್ನೆಗೆ ಶ್ರೀರಾಮಕೃಷ್ಣರು ಹೇಳುತ್ತಾರೆ: ''ಆತ ನನ್ನು ಈ ಸ್ಥೂಲ ಕಣ್ಣುಗಳಿಂದ ನೋಡಲಾಗುವುದಿಲ್ಲ. ಸಾಧನೆ ಮುಂದುವರಿಸುತ್ತ ಮುಂದುವರಿಸುತ್ತ ಸಾಧಕನಿಗೆ ಪ್ರೇಮದ ಶರೀರ ಉಂಟಾಗುತ್ತದೆ. ಅದಕ್ಕೆ ಪ್ರೇಮದ ಕಣ್ಣು ಪ್ರೇಮದ ಕಿವಿ

ಇರುತ್ತದೆ. ಆ ಕಣ್ಣುಗಳಿಂದ ಆತ ನೋಡುತ್ತಾನೆ, ಆ ಕಿವಿಗಳಿಂದ ಭಗವಂತನ ವಾಣಿಯನ್ನು ಕೇಳುತ್ತಾನೆ.'' ನಮ್ಮ ಇಂದ್ರಿಯ ಗೋಚರವೇ ಸತ್ಯ ಎಂದು ಹೇಳಲಾಗದು. ನಮಗೆ ಅಗೋಚರ ವಾದುದೂ ಪ್ರೇಮಶರೀರದ ಇಂದ್ರಿಯಗಳಿಗೆ ಗೋಚರಿಸ ಬಹುದು – ಎಲ್ಲರ ಕಣ್ಣಿಗೆ ಪ್ರಪಂಚ ಬೇರೆ ರೀತಿ ಕಾಣಿಸುವಂತೆ. ಈ ಪ್ರೇಮಶರೀರ ಏನೆಂಬುದು ನಮ್ಮ ಸಾಮಾನ್ಯ ಬುದ್ಧಿಗೆ ತಿಳಿಯುವಂತಹುದಲ್ಲ. ಇಂತಹ ಉನ್ನತ ಸ್ಥಿತಿಯಲ್ಲಿ ಹಳೆಯ ವ್ಯಕ್ತಿತ್ವ ನಾಶವಾಗಿ ಹೊಸ ವ್ಯಕ್ತಿತ್ವವು ಆವಿರ್ಭವಿಸುತ್ತದೆ. ''I died, but never felt more alive'' (ನಾನು ಸತ್ತೆ, ಆದರೆ ನಾನೆಂದೂ ಅಂತಹ ಜೀವಂತಿಕೆಯನ್ನು ಅನುಭವಿಸಿರಲಿಲ್ಲ.) *(William A. Richards, 'Sacred Knowledge', 26.)*

ಶ್ರೀರಾಮಕೃಷ್ಣರು ಮುಂದುವರಿಸುತ್ತಾರೆ: ''ಭಗವಂತನಲ್ಲಿ ಪ್ರೀತಿ ಬಹಳವಾಗಿ ಉಂಟಾಗದವರೆಗೆ ಇದು ಸಾಧ್ಯವಿಲ್ಲ. ಬಹಳ ಪ್ರೀತಿ ಉಂಟಾಯಿತು ಎಂದರೆ, ಎಲ್ಲವೂ ಭಗವನ್ಮಯವಾಗಿ ಕಾಣುತ್ತದೆ. ಇದು ಕಾಮಾಲೆ ರೋಗ ಅಧಿಕವಾದರೆ ಎಲ್ಲವೂ ಹಳದಿಯಾಗಿ ಕಾಣುವ ಹಾಗೆ. ಆಗ ಅನುಭವವಾಗುತ್ತದೆ, 'ನಾನೇ ಅವನು' ಎಂಬುದಾಗಿ. ಕುಡುಕನಿಗೆ ಅಧಿಕವಾಗಿ ನಶೆ ಹತ್ತಿಬಿಟ್ಟಿತು ಎಂದರೆ, ಆತ ಹೇಳುತ್ತಾನೆ: 'ನಾನೇ ಕಾಳಿ!' ಗೋಪಿಯರು ಪ್ರೇಮೋನ್ಮತ್ತರಾಗಿ ಹೇಳಲಾರಂಭಿಸಿದರು: 'ನಾನೇ ಕೃಷ್ಣ! ನಾನೇ ಕೃಷ್ಣ.'

ದೇಹ ಮನಸ್ಸುಗಳನ್ನು ಮೀರಿದಾಗ, ಚೈತನ್ಯದ ಹಂತದಲ್ಲಿ 'ನಾನೇ ಅವನು' ಎಂಬ ಅನುಭವವಾಗುತ್ತದೆ. ಸ್ವಾಮಿ ವಿವೇಕಾನಂದರು ನೀಡಿರುವ ಒಂದು ಉದಾಹರಣೆಯ ಮೂಲಕ ಇದನ್ನು ವಿವರಿಸಬಹುದು. ಮಣ್ಣಿನಿಂದ ವಿವಿಧ ಪ್ರಾಣಿಗಳ ವಿಗ್ರಹವನ್ನು ತಯಾರಿಸಿದರೆ, ರೂಪಗಳ ದೃಷ್ಟಿಯಿಂದ ಅವುಗಳಲ್ಲಿ ಭೇದವಿದ್ದರೂ, ಮಣ್ಣಿನ ದೃಷ್ಟಿಯಿಂದ ಅವೆಲ್ಲವೂ ಒಂದೇ. ಹಾಗೆಯೇ, ಪ್ರಪಂಚದಲ್ಲಿರುವ ಚೇತನಾಚೇತನಗಳೆಲ್ಲವೂ ಭಗವಂತನ ವಿವಿಧ ಅಭಿವ್ಯಕ್ತಿಗಳು. ನಾಮ, ರೂಪಗಳನ್ನು ಮೀರಿ ಹೋದಾಗ ಎಲ್ಲವೂ ಭಗವಂತನೆಂಬ ಅನುಭವವಾಗುತ್ತದೆ.

ಈ ರೀತಿಯ ಐಕ್ಯತೆಯ ಅನುಭವ ಎಲ್ಲ ಧರ್ಮಗಳಿಗೂ ಸಮಾನವಾದುದು. ಬಯಾಜಿಟ್ ಎಂಬ ಸೂಫಿ ಸಂತನಿದ್ದನು. ಅವನು ಕೆಲವೊಮ್ಮೆ ಪ್ರಜ್ಞಾತೀತ ಸ್ಥಿತಿಯನ್ನು ಮುಟ್ಟಿದಾಗ ವಿಚಿತ್ರವಾಗಿ ವರ್ತಿಸುತ್ತಿದ್ದನು, ಮಾತನಾಡುತ್ತಿದ್ದನು. ಅವನ ಸೇವಕರಿಗಾಗಲಿ, ಇತರರಿಗಾಗಲಿ ಅದೇನೂ ಅರ್ಥವಾಗುತ್ತಿರಲಿಲ್ಲ. ಒಮ್ಮೆ ಆ ಸ್ಥಿತಿಯಲ್ಲಿರುವಾಗ ಅವನು, ''ನಾನೇ ದೇವರು, ಎಲ್ಲರೂ ನನ್ನನ್ನು ಪೂಜಿಸಿ'' ಎಂದು ಹೇಳತೊಡಗಿದನು. ಇಸ್ಲಾಂ ಧರ್ಮದಲ್ಲಿ ಆ ರೀತಿ ಹೇಳುವುದೆಂದರೆ ದೈವನಿಂದೆ. ಬಯಾಜಿದ್ ಆ ಸ್ಥಿತಿಯಿಂದ ಹೊರಬಂದಾಗ ಸೇವಕನು, ಅವನು ಆ ಆತ್ಮವಿಸ್ಮೃತಿಯ ಸ್ಥಿತಿಯಲ್ಲಿ ಆಡಿದ ಮಾತುಗಳನ್ನು ಅವನಿಗೆ ತಿಳಿಸಿ ಎಚ್ಚರಿಕೆ ನೀಡಿದನು. ಆ ಸಂತನಿಗಾದರೋ ಅದಾವುದರ ಪರಿವೆಯೂ ಇರಲಿಲ್ಲ. ''ಇನ್ನೊಮ್ಮೆ ನಾನು ಆ ರೀತಿ ಮಾತನಾಡಿದರೆ ನನ್ನನ್ನು ದೊಣ್ಣೆಯಿಂದ ಹೊಡೆ'' ಎಂದು ಸೇವಕನಿಗೆ ಆದೇಶಿಸಿದನು. ಇನ್ನೊಮ್ಮೆ ಅದೇ ಪ್ರಸಂಗ ಬಂದೊಗಿದಾಗ ಸೇವಕನು ದೊಣ್ಣೆಯ ಪ್ರಯೋಗ ಮಾಡಲುದ್ಯುಕ್ತನಾದನು. ಏನಾಶ್ಚರ್ಯ!! ಸೇವಕನು ಸಂತನ ಬೆನ್ನಿಗೆ ಹೊಡೆದರೆ ಸೇವಕನ ಬೆನ್ನಿಗೆ ನೋವಾಗುತ್ತಿತ್ತು. ಕಾಲಿಗೆ ಹೊಡೆದರೆ ತನ್ನ ಕಾಲಿಗೆ ನೋವಾಗುತ್ತಿತ್ತು. ಅವನು ಚಕಿತನಾಗಿ ಬೇರೆಯವರನ್ನೆಲ್ಲ ಕರೆದನು. ಅವರೂ ಹೊಡೆದರು, ಅವರೇ ನೋವನ್ನು ಅನುಭವಿಸಿದರು. ಇದಾವುದರ ಪರಿವೆಯೂ ಆ ಸಂತನಿಗಿರಲಿಲ್ಲ.

ಈ ರೀತಿಯ ಭಕ್ತಿಯ ತೀವ್ರತೆಯಲ್ಲಿ ಭಕ್ತನು ಅದ್ವೈತ ಸ್ಥಿತಿಯನ್ನೇ ಅನುಭವಿಸುತ್ತಾನೆ ಎಂಬುದನ್ನು ಶ್ರೀರಾಮಕೃಷ್ಣರು ಇಲ್ಲಿ ಸ್ಪಷ್ಟಪಡಿಸುತ್ತಾರೆ.

ಏಕದೇವತೆಯನ್ನು ನಂಬುವ ಧರ್ಮಗಳಿಗೆ (monotheistic religions) ಈ ಅದ್ವೈತಭಾವವನ್ನು ಅರಗಿಸಿಕೊಳ್ಳುವುದು ತುಂಬ ಕಷ್ಟ, ಹಾಗೂ ಅದನ್ನು ದೇವನಿಂದೆ (blasphamous) ಎಂದೇ ಪರಿಗಣಿಸುತ್ತಾರೆ. ಅವರ ಭಾಷೆಯೂ ಅದನ್ನು ವ್ಯಕ್ತಪಡಿಸಲು ಸಮರ್ಥವಲ್ಲ ಎಂದು ವಿಲಿಯಂ ರಿಚರ್ಡ್ ಅವರು ಅಭಿಪ್ರಾಯಪಡುತ್ತಾರೆ: ''ಹಿಂದೂ ಧರ್ಮದಲ್ಲಿ ಆತ್ಮ-ಬ್ರಹ್ಮ ಐಕ್ಯತೆಯ ಅನುಭವವನ್ನು ಸುಲಭವಾಗಿ ವ್ಯಕ್ತಪಡಿಸಿರುವಂತೆ ಪಾಶ್ಚಾತ್ಯ ಚಿಂತನೆ ಮತ್ತು ಭಾಷೆ ಅದನ್ನು ಸೂಕ್ತವಾಗಿ ವ್ಯಕ್ತಪಡಿಸಲು ಅಸಮರ್ಥವಾಗಿವೆ. ಪಾಶ್ಚಾತ್ಯ ವ್ಯಕ್ತಿಯು 'ನಾನು ದೇವರು' ಎಂದು ಒಂದು ಕಾವ್ಯೋಕ್ತಿಯಂತೆ ಹೇಳಿದರೂ ಕೂಡ, ನಮ್ಮ ಪ್ರವೃತ್ತಿ ಏನೆಂದರೆ ಅದು ದುರಹಂಕಾರ ಪ್ರೇರಿತ ಹುಚ್ಚು ಪ್ರಲಾಪವೆಂದೇ ಪರಿಗಣಿಸಲಾಗುತ್ತದೆ ಮತ್ತು ಮನೋವೈದ್ಯನಿಂದ ಅವನಿಗೆ ಚಿಕಿತ್ಸೆ ಕೊಡಿಸುವುದು.'' *('Sacred Knowledge', P.44)*

## ಭಗವತ್ಕೃಪೆ

ಶ್ರೀರಾಮಕೃಷ್ಣರು: ''ಆತನ ಕೃಪೆ ದೊರಕಿತು ಎಂದರೆ ಇನ್ನು ಭಯಪಡಬೇಕಾಗಿಲ್ಲ. ಮಗು ತಂದೆಯ ಕೈಯನ್ನು ಹಿಡಿದುಕೊಂಡಿದ್ದರೆ ಅದು ಬೀಳಬಹುದಾದ ಸಂಭವ. ಆದರೆ ತಂದೆಯೇ ಅದರ ಕೈಯನ್ನು ಹಿಡಿದುಕೊಂಡಿದ್ದರೆ ಇನ್ನು ಅದು ಹೆದರಬೇಕಾಗಿಲ್ಲ. ಭಗವಂತನೇ ಕೃಪೆಮಾಡಿ ಸಂದೇಹ ನಿವೃತ್ತಿ ಮಾಡಿಕೊಟ್ಟರೆ, ಇನ್ನು ಕಷ್ಟಪಡಬೇಕಾಗಿರುವುದಿಲ್ಲ. ಆದರೆ ಆತನ ಸಾಕ್ಷಾತ್ಕಾರಕ್ಕಾಗಿ ವ್ಯಾಕುಲರಾಗಿ, ಆತನನ್ನು ಕರೆಯುತ್ತ ಸಾಧನೆ ಮಾಡುತ್ತ ಮಾಡುತ್ತ ಇದ್ದರೆ, ಆತನ ಕೃಪೆ ಒದಗುತ್ತದೆ. ಮಗು ತನಗಾಗಿ ಬಹಳ ಸುತ್ತಿ ಬಳಸಾಡುತ್ತಿರುವುದನ್ನು ನೋಡಿದರೆ ತಾಯಿಗೆ ಮರುಕ ಹುಟ್ಟಿಬಿಡುತ್ತದೆ. ಅವಿತುಕೊಂಡಿದ್ದ ತಾಯಿ ಹೊರಕ್ಕೆ ಬಂದು ತೋರಿಸಿಕೊಂಡು ಬಿಡುತ್ತಾಳೆ.''

*(ಮುಂದುವರಿಯುವುದು*